## ಸನ್ನಿ ಗಿಂತ ಪೂನಂ ಮುಂದೆ!



**ಪೂ**ನಂ ಪಾಂಡೆಯೋ, ಸನ್ನಿ ಲಿಯನ್ನೋ? ರೇಸ್‌ನಲ್ಲಿ ಪೂನಂ ಪಾಂಡೆ ಗೆದ್ದಿದ್ದಾರೆ. ಸನ್ನಿ ಲಿಯೋನ್ ವಿಶ್ವದೆಲ್ಲೆಡೆ 'ಖ್ಯಾತಿ' ಗಳಿಸಿದ ನೀಲಿ ಚಿತ್ರ ತಾರೆ. ಪೂನಂ ಪಾಂಡೆ ಒಂದೆರಡು ಚಿತ್ರಗಳಲ್ಲಿ ಕಾಣಿಸಿದ್ದು ಬಿಟ್ಟರೆ ಅರೆಬೆತ್ತಲೆ ಚಿತ್ರಗಳು, ಹೇಳಿಕೆಗಳಿಂದಲೇ ಸುದ್ದಿಯಾದವರು. ಪಡ್ಡೆ ಹೈಕಳ ಮೈ ಬೆಚ್ಚಗಾಗಿಸುವುದರಲ್ಲಿ ಇಬ್ಬರೂ ಮಗ್ನ. ಸನ್ನಿ ಬಾಲಿವುಡ್ ಚಿತ್ರಗಳಲ್ಲಿ ವೈವಿಧ್ಯಮಯ ಪಾತ್ರಗಳ ಮೂಲಕ ದೇಹಪ್ರದರ್ಶನದ ಜೊತೆಗೆ ಅಭಿನಯ ಪ್ರತಿಭೆಯನ್ನೂ ಪ್ರದರ್ಶಿಸುವ ಉಮೇದಿನಲ್ಲಿದ್ದಾರೆ. ಆದರೆ ಇಬ್ಬರ ನಡುವೆ ಅತಿ ಹೆಚ್ಚು ಜನಪ್ರಿಯರು ಯಾರು ಎಂದು ಉತ್ತರ ಹುಡುಕಿದರೆ ಪೂನಂ ಪಾಂಡೆ ತಕ್ಕಡಿ ಹೆಚ್ಚು ತೂಗುತ್ತದೆ. ಸಾಮಾಜಿಕ ಜಾಲತಾಣವನ್ನು ವೈಯಕ್ತಿಕ ವರ್ಚಸ್ಸಿಗಾಗಿ ಜಾಣ್ಮೆಯಿಂದ ಬಳಸಿಕೊಂಡ ಪೂನಂ, ಸನ್ನಿಗಿಂತಲೂ ತಾನು ಹೆಚ್ಚು ಜನಪ್ರಿಯೆ ಎಂದು ಸಾಬೀತು ಪಡಿಸಿದ್ದಾರೆ.

ಸಾಮಾನ್ಯ ರೂಪದರ್ಶಿಯಾಗಿದ್ದ ಪೂನಂ ಈಗ ಬಾಲಿವುಡ್‌ನಲ್ಲಿ ನಟಿಸದೆಯೂ 'ಸ್ಟಾರ್' ಪಟ್ಟ ಗಿಟ್ಟಿಸಿಕೊಂಡಾಕೆ. ಪೂನಂ ಟ್ವಿಟ್ಟರ್ ಖಾತೆಯನ್ನು ಹಿಂಬಾಲಿಸುತ್ತಿರುವವರ ಸಂಖ್ಯೆ ನಾಲ್ಕು ಲಕ್ಷಕ್ಕೇರಿರುವುದು ಆಕೆಯ ಜನಪ್ರಿಯತೆಗೆ ಸಾಕ್ಷಿ. ನೀಲಿಚಿತ್ರಗಳ ಮೂಲಕ ಅಂತರರಾಷ್ಟ್ರೀಯ ಮಟ್ಟದಲ್ಲಿ ಹೆಸರಾದ ಸನ್ನಿಯ ಟ್ವಿಟ್ಟರ್ ಖಾತೆಯನ್ನು ಹಿಂಬಾಲಿಸುತ್ತಿರುವ ಅಭಿಮಾನಿಗಳ ಸಂಖ್ಯೆಗೆ ಸರಿಸಮಾನವಾಗಿ ಪೂನಂ ಅಭಿಮಾನಿಗಳ ಸಂಖ್ಯೆಯೂ ಏರಿದೆ. ಸನ್ನಿಯ ಅಂತರರಾಷ್ಟ್ರೀಯ 'ಮಾನ್ಯತೆ'ಗೆ ಹೋಲಿಸಿದಾಗ ಪೂನಂ ಹೆಸರು ಭಾರತದಲ್ಲಷ್ಟೇ ಸೀಮಿತ.

ಪೂನಂ ಹಿಂಬಾಲಕರ ಸಂಖ್ಯೆಯಲ್ಲಿ ಆಗುತ್ತಿರುವ ಏರಿಕೆಯನ್ನು ಗಮನಿಸಿದಾಗ ಅತಿ ಶೀಘ್ರದಲ್ಲೇ ಸನ್ನಿಯನ್ನು ಆಕೆ ಹಿಂದೆ ಹಾಕುವುದು ಖಚಿತ. ಅಂದ ಹಾಗೆ, ಮತ್ತೊಬ್ಬ 'ಅರೆಬೆತ್ತಲೆ ಚಿತ್ರಗಳ ರಾಣಿ' ಶೆರ್ಲಿನ್ ಚೋಪ್ರಾ ಎಷ್ಟೇ ಅಬ್ಬರಿಸುತ್ತಿದ್ದರೂ ಆಕೆಯ ಟ್ವಿಟ್ಟರ್ ಹಿಂಬಾಲಕರ ಸಂಖ್ಯೆ ಇರುವುದು ಕೇವಲ ಒಂದೂವರೆ ಲಕ್ಷ.

## ಐಶ್ ಬೇಬಿ ರೀ ಎಂಟ್ರಿ



**ಹೆ**ಚ್ಚೂ ಕಡಿಮೆ ಮೂರು ವರ್ಷವಾಯಿತು– ನಟಿ ಐಶ್ವರ್ಯಾ ರೈ ಬೆಳ್ಳಿತೆರೆಯಲ್ಲಿ ಕಾಣಿಸಿಕೊಂಡು. 2010ರಲ್ಲಿ 'ಗುಜಾರಿಶ್' ಐಶ್ ಬೇಬಿ ಪರದೆ ಮೇಲೆ ಕಾಣಿಸಿಕೊಂಡ ಕೊನೆಯ ಚಿತ್ರ. ಆರಾಧ್ಯಾ ಜನಿಸಿದ ಬಳಿಕ ದಪ್ಪಗಾಗಿದ್ದ ಐಶ್ ಒಂದಷ್ಟು ಕಾಲ ಹೊರಜಗತ್ತಿಗೂ ಕಾಣಿಸಿಕೊಂಡಿರಲಿಲ್ಲ. ಕಾನ್ ಚಿತ್ರೋತ್ಸವದಲ್ಲಿ ಮಿಂಚಿದ ಐಶು ಸೌಂದರ್ಯ ಒಂದಿಷ್ಟೂ ಕಮರಿಲ್ಲ ಎಂದು ವಿಶ್ವವೇ ಮಾತಾಡಿಕೊಂಡಿತ್ತು. ಹೀಗೆ ಸುದೀರ್ಘ ಸಮಯ ಚಿತ್ರರಂಗದಿಂದ ದೂರವುಳಿದಿದ್ದ ಐಶ್ ಮತ್ತೆ ಕ್ಯಾಮೆರಾ ಮುಂದೆ ನಿಲ್ಲುವ ಸಮಯ ಸನ್ನಿಹಿತವಾಗಿದೆ. ಮತ್ತೆ ಮರಳುವ ಉತ್ಸಾಹದಲ್ಲಿರುವ ಈ ಕರಾವಳಿ ಬೆಡಗಿ ನಿರ್ದೇಶಕರು ತಂದಿರಿಸುತ್ತಿರುವ ಸಿನಿಮಾ ಕಥೆಗಳ ಪುಟಗಳನ್ನು ತಿರುವಿ ಹಾಕುತ್ತಿದ್ದಾರಂತೆ. ಅವುಗಳಲ್ಲಿ ಎರಡು ಮೂರು ಕಥೆಗಳನ್ನೂ ಐಶ್ ಆಯ್ದುಕೊಂಡಿದ್ದಾರಂತೆ. ನಿರ್ಮಾಪಕ ಸಂಜಯ್ ಲೀಲಾ ಬನ್ಸಾಲಿ ತಮ್ಮ ಮುಂದಿನ ಚಿತ್ರಕ್ಕಾಗಿ ಐಶ್‌ರನ್ನು ಸಂಪರ್ಕಿಸಿದ್ದಾರೆ ಎನ್ನುವುದು ಸದ್ಯದ ಸುದ್ದಿ.

■ ಅಮಿ

Printed and Published by S.V. Srinivasan on behalf of The Printers (Mysore) Private Ltd. Printed at Rajhans Enterprises, No.134, 4th Main Road, Industrial Town, Rajajinagar, Bangalore- 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bangalore - 560074. Editor: K.N. TILAK KUMAR.
Editorial Office: 75, M.G Road, Bangalore-560 001 E-mail:editorsu@sudha.co.in. Phone: 2588 0000, Fax: 25880618, Editorial:25880619, Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65

